ಉಡುಪಿ ತಾಲ್ಲೂಕಿನಲ್ಲಿ ಕೊಠಡಿಗಳ ಕೊರತೆಯಿರುವ ಪ್ರೌಢಶಾಲೆಗಳು

1.	ಮೂಡುಗಿಳಿಯಾರ	-	5
2.	ಅವರ್ಸೆ	-	2
3.	ಬ್ರಹ್ಮಾವರ	-	5
4.	ಯರಮಾಳ್ ತೆಂಕ	-	2
			14

ಕೊಠಡಿಗಳ ಕೊರತೆಯಿರುವ ಪದವಿ ಪೂರ್ವ ಕಾಲೇಜುಗಳು

1.	ಕೊಕ್ಕರ್ಣೆ	-	2
2.	ಉಡುಪಿ ಬಾಲಕಿಯರ ಪದವಿ ಪೂರ್ವ ಕಾಲೇಜು	-	5
3.	ಮುದರಂಗಡಿ	-	1
4.	ಹಿರಿಯಡ್ಕ	-	1
	ಒಟ್ಟು	-	**9**

ರಾಜ್ಯದಲ್ಲಿ ಯುವಕ ಮತ್ತು ಯುವತಿ ಮಂಡಲಗಳಿಗೆ ಉಚಿತ ನಿವೇಶನ.

2246 - ಶ್ರೀ ಪ್ರತಾಪಚಂದ್ರಶೆಟ್ಟಿ ಕೆ. (ಕುಂದಾಪುರ) : ಮಾನ್ಯ ಯುವಜನಾ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯುವಕ ಮಂಡಲ ಹಾಗೂ ಮಂಡಲಿಗಳ ಕಟ್ಟಡಕ್ಕೆ ಉಚಿತ ನಿವೇಶನವನ್ನು ಸರ್ಕಾರವೇ ನೀಡುತ್ತದೆಂದು ಘೋಷಣ ಮಾಡಿರುವುದು ನಿಜವೇ?

ಆ) ನಿಜವಾದಲ್ಲಿ ಕಳೆದ ಎರಡು ವರ್ಷಗಳಿಂದ ಮಂಜೂರು ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು?

ಇ) ಇಲ್ಲವಾದಲ್ಲಿ ಉಚಿತವಾಗಿ ಮಂಜೂರು ಮಾಡುವ ಯೋಜನೆ ಇದೆಯೇ?

ಈ) ಕುಂದಾಪುರ ಮತ್ತು ಉಡುಪಿ ತಾಲ್ಲೂಕಿನಲ್ಲಿ ಕಳೆದ 2 ವರ್ಷಗಳಿಂದ ಯುವಕ ಮಂಡಲ ಮತ್ತು ಯುವತಿ ಮಂಡಲಗಳಿಗೆ ಕೊಠಡಿಗಾಗಿ ಮಂಜೂರಾದ ಹಣವೆಷ್ಟು? ಮತ್ತು ಕೊಠಡಿಗಳ ಸಂಖ್ಯೆ ಎಷ್ಟು? ಯಾವ ಕಡೆಗಳಲ್ಲಿ ಮಂಜೂರು ಮಾಡಲಾಗಿದೆ?.

ಶ್ರೀ ಆಜಯಕುಮಾರ್ ಸರನಾಯಕ್ (ಯುವಜನಾಸೇವಾ ಹಾಗೂ ಕ್ರೀಡಾ ಸಚಿವರು) .

ಅ) ನಿಜವಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಇಲ್ಲ

ಈ) ಕುಂದಾಪುರ ಮತ್ತು ಉಡುಪಿ ತಾಲ್ಲೂಕಿನಲ್ಲಿ ಕಳೆದ 2 ವರ್ಷಗಳಿಂದ ಯುವಕ ಮಂಡಲ ಯುವತಿ ಮಂಡಳಿಗಳಿಗೆ ಕೊಡಮಾಡಿಗಾಗಿ ಮಂಜೂರಾದ ಹಣದ ವಿವರಗಳು ಈ ಕೆಳಕಂಡಂತಿದೆ.

		ರೂ.
ಕುಂದಾಪುರ	-	20,000.00
ಉಡುಪಿ	-	57,000.00

3 ಯುವಕ ಮಂಡಲಗಳಿಗೆ ಈ ಕೆಳಕಂಡ ಸ್ಥಳಗಳಲ್ಲಿ ಕಟ್ಟಡ ಕಟ್ಟಲು ಹಣ ಮಂಜೂರು ಮಾಡಲಾಗಿದೆ.

1.	ಆದರ್ಶ ಯುವಕ ಮಂಡಲಕ್ಕಾಗಿ ಹಕ್ಲು	-	ಕುಂದಾಪುರ
2.	ಶ್ರೀ ಗುರು ರಾಘವೇಂದ್ರ ಭಜನಾ ಮಂಡಲಿದ್ದು	-	ಉಡುಪಿ
3.	ಯುವಕ ಮಂಡಲ ಕುಂಜೆಬೆಟ್ಟು	-	ಉಡುಪಿ

ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಹುದ್ದೆಗಳು

2248 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿ ಪ್ರೌಢಶಾಲೆ ಮತ್ತು ಪದವಿ ಪೂರ್ವಕಾಲೇಜುಗಳಲ್ಲಿ ಮಂಜೂರಾದ ವಿವಿಧ ಹುದ್ದೆಗಳೆಷ್ಟು? (ಭೋದಕ ಹಾಗೂ ಬೋಧಕೇತರ ವಿವರವನ್ನು ಒದಿಗಿಸುವುದು).

ಆ) ಕೊರತೆ ಇರುವ ಹುದ್ದೆಗಳೆಷ್ಟು.

ಇ) ಈ ಕೊರತೆ ತುಂಬಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್. ಜಿ ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಕುಂದಾಪುರ ಮತ್ತ ಉಡುಪಿ ತಾಲ್ಲೂಕುಗಳ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಮಂಜೂರಾಗಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ವಿವರ ಕೆಳಕಂಡಂತಿವೆ.

	ಕುಂದಾಪುರ ತಾ:	ಉಡುಪಿ ತಾ:
ಪ್ರೌಢಶಾಲೆ : ಬೋಧಕ :	261	328
ಬೋಧಕೇತರ :	37	49
ಪದವಿ ಪೂರ್ವ ಕಾಲೇಜು : ಬೋಧಕ :	98	130
ಬೋಧಕೇತರ :	37	49